ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 12–12–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘದ ದ್ವೈವಾರ್ಷಿಕ 17 ನೇ ರಾಜ್ಯಮಟ್ಟದ ಸಮ್ಮೇಳನ :<br><br>ಉದ್ಘಾಟನೆ:<br><br>ಗೌರವಾನ್ವಿತ ನ್ಯಾಯಮೂರ್ತಿ<br>ಶ್ರೀ ಹೆಚ್.ಎಲ್. ದತ್ತು,<br>ಸರ್ವೋಚ್ಛ ನ್ಯಾಯಾಲಯದ<br>ಮುಖ್ಯ ನ್ಯಾಯಾಧೀಶರು,<br>ನವದೆಹಲಿ<br><br>ಅಧ್ಯಕ್ಷತೆ:<br><br>ಗೌರವಾನ್ವಿತ ನ್ಯಾಯಮೂರ್ತಿ<br>ಶ್ರೀ ಡಿ.ಹೆಚ್. ವಘೇಲ,<br>ಕರ್ನಾಟಕ ಉಚ್ಛನ್ಯಾಯಾಲಯದ<br>ಮುಖ್ಯ ನ್ಯಾಯಾಧೀಶರು<br><br>ಮುಖ್ಯ ಅತಿಥಿಗಳು:<br><br>ನ್ಯಾಯಮೂರ್ತಿ ಶ್ರೀ ವಿ. ಗೋಪಾಲಗೌಡ,<br>ಸರ್ವೋಚ್ಛ ನ್ಯಾಯಾಲಯದ<br>ನ್ಯಾಯಾಧೀಶರು, ನವದೆಹಲಿ<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br><br>ಶ್ರೀ ಟಿ.ಬಿ. ಜಯಚಂದ್ರ, | 13–12–2014<br>ಶನಿವಾರ<br>ಬೆಳಗ್ಗೆ<br>10–35 | ಬ್ಯಾಂಕ್ವೆಟ್ ಹಾಲ್ ,<br><br>ವಿಧಾನ ಸೌಧ,<br><br>ಬೆಂಗಳೂರು –560 001 |

| | | | |
|---|---|---|---|
| | ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು | | |
| 2 | ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘದ ದ್ವೈವಾರ್ಷಿಕ 17 ನೇ ರಾಜ್ಯಮಟ್ಟದ ಸಮ್ಮೇಳನ :<br><br>ಸಮಾರೋಪ ಭಾಷಣ:<br><br>ನ್ಯಾಯಮೂರ್ತಿ ಶ್ರೀ ವಿ. ಗೋಪಾಲಗೌಡ,<br><br>ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರು, ನವದೆಹಲಿ<br><br>ಅಧ್ಯಕ್ಷತೆ:<br><br>ನ್ಯಾಯಮೂರ್ತಿ<br>ಶ್ರೀ ಡಿ.ಹೆಚ್. ವಘೇಲ,<br>ಕರ್ನಾಟಕ ಉಚ್ಛನ್ಯಾಯಾಲಯದ ಮುಖ್ಯ ನ್ಯಾಯಾಧೀಶರು<br><br>ಮುಖ್ಯ ಅತಿಥಿಗಳು:<br><br>ನ್ಯಾಯಮೂರ್ತಿ ಶ್ರೀ ಕೆ.ಎಲ್. ಮಂಜುನಾಥ್,<br>ಕರ್ನಾಟಕ ಉಚ್ಛ ನ್ಯಾಯಾಲಯದ ನ್ಯಾಯಾಧೀಶರು<br><br>ಡಾ: ಹೆಚ್.ಸಿ. ಮಹದೇವಪ್ಪ,<br>ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಖಾತೆ ಸಚಿವರು | 14-12-2014<br>ಭಾನುವಾರ<br>ಮಧ್ಯಾಹ್ನ<br>2-30 | ಬ್ಯಾಂಕ್ವೆಟ್ ಹಾಲ್ ,<br><br>ವಿಧಾನ ಸೌಧ,<br><br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಕೆ.ಓ.ಎಸ್. ಪರೀಕ್ಷೆ

**ಬೆಂಗಳೂರು :ಡಿಸೆಂಬರ್:12:(ಕರ್ನಾಟಕ ವಾರ್ತೆ):-**

ಡಿಸೆಂಬರ್ –2014 ರ ಮಾಹೆಯ ನಾಲ್ಕನೇ ವಾರದಲ್ಲಿ ಕರ್ನಾಟಕ ಮುಕ್ತ ವಿದ್ಯಾಲಯ (ಕೆ.ಓ.ಎಸ್.) ಪರೀಕ್ಷೆಯನ್ನು 24–12–2014 ರಿಂದ 3–1–2015 ರವರೆಗೆ ನಡೆಸಲಾಗುತ್ತಿದೆ ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಪ್ರಕಟಣೆ ತಿಳಿಸಿದೆ.

## ಡಿ.ಇ.ಡಿ. ಪರೀಕ್ಷೆ

**ಬೆಂಗಳೂರು :ಡಿಸೆಂಬರ್:12:(ಕರ್ನಾಟಕ ವಾರ್ತೆ):–**

ಡಿಸೆಂಬರ್ –2014 ರ ಮಾಹೆಯ ನಾಲ್ಕನೇ ವಾರದಲ್ಲಿ ಪ್ರಥಮ ಮತ್ತು ದ್ವಿತೀಯ ಡಿ.ಇಡಿ. ಪೂರಕ ಪರೀಕ್ಷೆಯನ್ನು ಡಿಸೆಂಬರ್ 24 ರಿಂದ 31 ರವರೆಗೆ ನಡೆಸಲಾಗುತ್ತಿದೆ ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಪ್ರಕಟಣೆ ತಿಳಿಸಿದೆ.

## ಕುಡಿಯುವ ನೀರಿನ ದುರ್ಬಳಕೆ ತಡೆಯಲು ಮೀಟರ್ ಅಳವಡಿಕೆ: ಸಚಿವ ಎಚ್.ಕೆ.ಪಾಟೀಲ್

**ಬೆಳಗಾವಿ:ಡಿಸೆಂಬರ್:12:(ಕರ್ನಾಟಕ ವಾರ್ತೆ):–**

ಕುಡಿಯುವ ನೀರಿನ ದುರ್ಬಳಕೆಯನ್ನು ತಡೆಯಲು ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರು ಪೂರೈಕೆಗೆ ಮೀಟರ್ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪಂಚಾಯತ್‌ರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ.ಪಾಟೀಲ್ ಅವರು ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಸದಸ್ಯ ಮೃತ್ಯಂಜಯ ಜಿನಗಾ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮನೆ ಸಂಪರ್ಕ ಹೊಂದಿರುವ ಒಬ್ಬರಿಂದ ಮೂರು ಜನರಿರುವ ಕುಟುಂಬಕ್ಕೆ ತಿಂಗಳಿಗೆ 30ರೂ, ಮತ್ತು ಮೂರು ಜನ ಮೇಲ್ಪಟ್ಟ ಕುಟುಂಬಕ್ಕೆ ಪ್ರತಿಯೊಬ್ಬರಿಗೆ ತಿಂಗಳಿಗೆ ತಲಾ 10ರೂ, ಕೌಟುಂಬಿಕ ಸಂಪರ್ಕವಲ್ಲದೇ ಸಾರ್ವಜನಿಕ ಸಲ್ಲಿ ಸಂಪರ್ಕಗಳಿಗೆ 20ರೂ ನಿಗದಿಪಡಿಸಲಾಗಿದೆ. ಇನ್ನುಳಿದಂತೆ ಗೃಹಬಳಕೆಯಲ್ಲದ ವಾಣಿಜ್ಯೋದ್ಯಮ ಹಾಗೂ ಇತರ ಸಂಪರ್ಕಗಳಿಗೆ ಮೀಟರ್ ಪ್ರಕಾರ ನಿಗದಿಪಡಿಸಿದ ದರ ವಿಧಿಸಲಾಗುವುದು ಎಂದು ಅವರು ಹೇಳಿದರು.

ಬಹು ಗ್ರಾಮ ಕುಡಿಯುವ ನೀರು ಯೋಜನೆಗಳಡಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಕುಡಿಯುವ ನೀರಿನ ನಲ್ಲಿಗಳಿಗೆ ನೀರಿನ ಮೀಟರ್ ಅಳವಡಿಸಲು ಮತ್ತು ಮೀಟರಿನ ವೆಚ್ಚವನ್ನು ಬಿಲ್ಲಿನಲ್ಲಿ ವಸೂಲಿ ಮಾಡಲು ಗ್ರಾಮ ಪಂಚಾಯತ್‌ಗಳಿಗೆ ಸೂಚಿಸಲಾಗಿದೆ. ಮೀಟರ್ ಖರೀದಿ ಪ್ರಕ್ರಿಯೆಯನ್ನು ಸ್ಥಳೀಯವಾಗಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ನಡೆಸಲು ಸೂಚಿಸಲಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

ಶುದ್ಧ ನೀರಿನ ಘಟಕ ಸ್ಥಾಪನೆ: ರಾಜ್ಯದಲ್ಲಿ ಈಗಾಗಲೇ 3ಸಾವಿರ ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದ್ದು, ಒಂದು ಸಾವಿರ ಘಟಕಗಳ ಸ್ಥಾಪನೆ ಕಾರ್ಯ ಚಾಲನೆಯಲ್ಲಿದೆ. ಕುಡಿಯುವ ನೀರಿನ ಘಟಕಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯಕ್ಕೆ ಆದ್ಯತೆ ನೀಡಲು ಸೂಚನೆ ನೀಡಲಾಗಿದೆ. ಘಟಕಗಳ ನಿರ್ವಹಣೆ ಮತ್ತು ಕಾರ್ಯಾಚರಣೆ ಆಯಾ ಏಜೆನ್ಸಿಗಳ ಹೊಣೆಯಾಗಿದ್ದು, ಮೇಲ್ವಿಚಾರಣೆ ಜವಾಬ್ದಾರಿಯಲ್ಲಿ ನಿರ್ಲಕ್ಷ ವಹಿಸುವವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಸದಸ್ಯ ಆಚಾರ್ ಹಾಲಪ್ಪ ಬಸಪ್ಪ ಅವರ ಪ್ರಶ್ನೆಗೆ ಸಚಿವರು ತಿಳಿಸಿದರು.

<u>ವಸತಿ ಗೃಹಗಳ ದುರಸ್ತಿಗೆ ಕ್ರಮ:</u> ದುಸ್ಥಿತಿಯಲ್ಲಿರುವ ತಾಲೂಕು ಪಂಚಾಯತ್ ವಸತಿ ಗೃಹಗಳ ದುರಸ್ತಿಗೆ ಅಂದಾಜು ಪಟ್ಟಿ ಸಲ್ಲಿಸುವಂತೆ ಈಗಾಗಲೇ ಸೂಚನೆ ನೀಡಲಾಗಿದೆ. ದುರಸ್ತಿಗೆ ತಾಲೂಕು ಪಂಚಾಯತ್ ನಿಧಿಯಿಂದ ಅನುದಾನ ಒದಗಿಸಲಾಗುವುದು. ತಾಲೂಕು ಪಂಚಾಯತ್ ವ್ಯವಸ್ಥೆಯನ್ನು ಬಲಗೊಳಿಸಲು ಸರ್ಕಾರ ಬದ್ಧವಾಗಿದ್ದು, ಅದನ್ನು ತೆಗೆದು ಹಾಕುವ ಯಾವುದೇ ಪ್ರಸ್ತಾಪ ಸರ್ಕಾರದ ಮುಂದಿಲ್ಲ ಎಂದು ಸದಸ್ಯ ಬಿ.ರಾಮಕೃಷ್ಣ ಅವರ ಪ್ರಶ್ನೆಗೆ ಸಚಿವರು ಸ್ಪಷ್ಟಪಡಿಸಿದರು.

## ಬೆಳಗಾವಿ ವಿಮಾನ ನಿಲ್ದಾಣ ಮೇಲ್ದರ್ಜೆಗೆ: ರೋಷನ್ ಬೇಗ್

**ಬೆಳಗಾವಿ:ಡಿಸೆಂಬರ್:12:(ಕರ್ನಾಟಕ ವಾರ್ತೆ):-**

ಬೆಳಗಾವಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲು ಯೋಜನೆ ರೂಪಿಸಲಾಗಿದೆ ಎಂದು ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವ ರೋಷನ್ ಬೇಗ್ ತಿಳಿಸಿದ್ದಾರೆ.

ಅವರು ಶುಕ್ರವಾರ ವಿಧಾನ ಪರಿಷತ್‌ನಲ್ಲಿ ಡಾ.ವೀರಣ್ಣ ಮತ್ತಿಕಟ್ಟಿ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ರಾಜ್ಯ ಸರ್ಕಾರವು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಏರ್‌ಬಸ್ 321 ಮಾದರಿಯ ವಿಮಾನಗಳ ಹಾರಾಟಕ್ಕಾಗಿ ಬೆಳಗಾವಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಯೋಜನೆ ರೂಪಿಸಲಾಗಿದೆ ಹಾಗೂ ಬೆಳಗಾವಿ ವಿಮಾನ ನಿಲ್ದಾಣದಿಂದ ಸುವರ್ಣಸೌಧಕ್ಕೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 4ರವರೆಗೆ ಬೆಳಗಾವಿ ಬಾಗಲಕೋಟೆ ರಾಜ್ಯ ಹೆದ್ದಾರಿಯನ್ನು ದ್ವಿಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗಿದೆ ಎಂದು ಇಂದು ತಿಳಿಸಿದ್ದಾರೆ.

## ಅನಧಿಕೃತ ಶಾಲೆಗಳ ಮೇಲೆ ಕ್ರಮಕೈಗೊಳ್ಳದ ಅಧಿಕಾರಿಗಳ ಮೇಲೆ ವಿರುದ್ಧ ಕ್ರಮ

**ಬೆಳಗಾವಿ:ಡಿಸೆಂಬರ್:12:(ಕರ್ನಾಟಕ ವಾರ್ತೆ):-**

ರಾಜ್ಯದಾದ್ಯಂತ ಅನುಮತಿರಹಿತವಾಗಿ ನಡೆಯುತ್ತಿರುವ ಖಾಸಗಿ ಶಾಲೆಗಳ ಮೇಲೆ ಸೂಕ್ತ ಕ್ರಮಕೈಗೊಳ್ಳದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದೆಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ್ ಅವರು ತಿಳಿಸಿದರು.

ಇಂದು ಬೆಳಿಗ್ಗೆ ವಿಧಾನ ಪರಿಷತ್‌ನಲ್ಲಿ ಸದಸ್ಯ ಎಂ. ಶ್ರೀನಿವಾಸ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಯಾವ ಅಧಿಕಾರಿಗಳ ಅವಧಿಯಲ್ಲಿ ಅನಧಿಕೃತ ಶಾಲೆಗಳು ಪ್ರಾರಂಭಗೊಂಡಿವೆ. ಎಂಬ ಮಾಹಿತಿಯನ್ನು ಪಡೆಯಲಾಗುತ್ತಿದ್ದು, ಮಾಹಿತಿ ಬಂದ ಕೂಡಲೇ ಆಯಾ ಅಧಿಕಾರಿಗಳ ಮೇಲೆ ಕಾನೂನಿನಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದರು.

ಬೆಂಗಳೂರು ನಗರದಲ್ಲಿ ಒಟ್ಟು 2736 ಪ್ರಾಥಮಿಕ ಹಾಗೂ 1682 ಪ್ರೌಢ ಅನುಧಾನರಹಿತ ಶಾಲೆಗಳಿವೆ. ಪೋಷಕರ ಮಾಹಿತಿಗಾಗಿ ನಮ್ಮ ಇಲಾಖೆಯ ವೆಬ್‌ಸೈಟ್‌ನಲ್ಲಿ ಅನುದಾನರಹಿತ ಶಾಲೆಗಳ ವಿವರವನ್ನು ಪ್ರಕಟಿಸಲಾಗಿದೆ. ಹಂತ ಹಂತವಾಗಿ ಇಂತಹ ಶಾಲೆಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು. ಮಕ್ಕಳ ಭವಿಷ್ಯದ

ದೃಷ್ಟಿಯಿಂದ ತೊಂದರೆಯಾಗದ ರೀತಿಯಲ್ಲಿ ಎಲ್ಲಾ ರೀತಿಯ ಮುಂಜಾಗೃತಾ ಕ್ರಮಕೈಗೊಳ್ಳಲಾಗಿದೆ ಎಂದು ಸಚಿವರು ಸಭೆಯಲ್ಲಿ ತಿಳಿಸಿದರು.

## ಶುಲ್ಕ ಪಾವತಿಗೆ ವಿನಾಯಿತಿ ನೀಡದ ಕಾಲೇಜಿನ ಮಾನ್ಯತೆ ರದ್ದು

**ಬೆಳಗಾವಿ:ಡಿಸೆಂಬರ್:12:(ಕರ್ನಾಟಕ ವಾರ್ತೆ):-**

ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಕಾಲೇಜುಗಳಲ್ಲಿ ನಿಗದಿತ ಆದಾಯ ಮಿತಿ ಹಾಗೂ ಕನಿಷ್ಠ ಅಂಕ ಪಡೆದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶದ ಸಮಯದಲ್ಲಿ ಶುಲ್ಕ ಪಾವತಿಗೆ ವಿನಾಯತಿ ನೀಡದ ಕಾಲೇಜಿನ ಮಾನ್ಯತೆಯನ್ನು ರದ್ದು ಪಡಿಸಲಾಗುವುದೆಂದು ಉನ್ನತ ಶಿಕ್ಷಣ ಸಚಿವರಾದ ಶ್ರೀ ಆರ್ ವಿ ದೇಶಪಾಂಡೆ ಅವರು ತಿಳಿಸಿದರು.

ಇಂದು ಬೆಳಿಗ್ಗೆ ವಿಧಾನ ಪರಿಷತ್‌ನಲ್ಲಿ ಸದಸ್ಯರಾದ ವಿ. ಸೋಮಣ್ಣ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗದ ಯಾವ ವಿದ್ಯಾರ್ಥಿಯ ಆದಾಯವು ಎರಡುವರೆ ಲಕ್ಷಕ್ಕಿಂತ ಕಡಿಮೆ ಇರುವುದೊ ಅವರ ಪ್ರವೇಶದ ಸಮಯದಲ್ಲಿ ಶುಲ್ಕ ಪಾವತಿಸಲು ವಿನಾಯಿತಿಯನ್ನು ನೀಡಲಾಗಿದೆ. ಹಾಗೆ ಅಂಥ ವಿದ್ಯಾರ್ಥಿಗಳಿಗೆ ಆದಾಯ ಮಿತಿಯನ್ನು ಒಳಪಡಿಸಿರುವುದಿಲ್ಲ. ಅವರಿಗೆ ಅಂಕದ ಅರ್ಹತೆಯ ಮೇಲೆ ಶುಲ್ಕ ವಿನಾಯತಿಯನ್ನು ನೀಡಲಾಗಿದೆ ಎಂದರು.

ಈ ಕುರಿತು ಸರ್ಕಾರ ಜಾರಿಗೊಳಿಸಿರುವ ಆದೇಶವನ್ನು ಪಾಲಿಸದೇ ಪ್ರವೇಶದ ಸಂದರ್ಭದಲ್ಲಿ ಶುಲ್ಕ ಪಡೆಯುತ್ತಿರುವ ಕಾಲೇಜುಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದಲ್ಲಿ ಅಂತಹ ಕಾಲೇಜಿನ ಮಾನ್ಯತೆಯನ್ನು ಯಾವುದೇ ಮುಲಾಜಿಲ್ಲದೆ ರದ್ದು ಪಡಿಸಲಾಗುವುದೆಂದು ಸಚಿವರು ಸಭೆಯಲ್ಲಿ ತಿಳಿಸಿದರು.

## ಮಕ್ಕಳ ಸಮೀಕ್ಷೆ: ತಪ್ಪು ಮಾಹತಿ ನೀಡಿದ ಶಿಕ್ಷಕರ ಮೇಲೆ ಕಠಿಣಕ್ರಮ

**ಬೆಳಗಾವಿ:ಡಿಸೆಂಬರ್:12:(ಕರ್ನಾಟಕ ವಾರ್ತೆ):-**

ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆಯಲ್ಲಿ ತಪ್ಪು ಮಾಹಿತಿ ನೀಡುವ ಶಿಕ್ಷಕರ ಮೇಲೆ ಕಠಿಣಕ್ರಮ ಕೈಗೊಳ್ಳಲಾಗುವುದೆಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ್ ಅವರು ತಿಳಿಸಿದರು.

ಇಂದು ವಿಧಾನ ಪರಿಷತ್‌ನಲ್ಲಿ ಸದಸ್ಯರಾದ ಅಲ್ಲಮ ಪ್ರಭು ಪಾಟೀಲ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಒಟು 26509 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ ಅದರಲ್ಲಿ 16694 ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲಾಗಿದೆ ಎಂದು ತಿಳಿಸಿದರು.

ಆದರೆ ಸಚಿವರ ಉತ್ತರಕ್ಕೆ ತೃಪ್ತರಾಗದ ಸದಸ್ಯರು, ಶಾಲೆಯಿಂದ ಹೊರಗುಳಿದ ಮಕ್ಕಳ ಮಾಹಿತಿಯನ್ನು ಶಿಕ್ಷಕರು ತಮ್ಮ ಅನುಕೂಲಕ್ಕೆ ತಂಕ್ಕತೆ ನೀಡುತಿದ್ದಾರೆಂದು ಸಚಿವರ ಗನಮನಕ್ಕೆ ತಂದಾಗ, ಈ ವಿಚಾರ ತಮ್ಮ ಗಮನಕ್ಕೂ ಬಂದಿದೆ ಎಂದ ಸಚಿವರು, ಹಲವು ಶಿಕ್ಷಕರು ತಾವು ಕೆಲಸ ಮಾಡುತ್ತಿರುವ ಸ್ಥಳದಲ್ಲಿಯೇ ಉಳಿದುಕೊಳ್ಳಲು ಮಕ್ಕಳ ಸಂಖ್ಯೆಯನ್ನು ಹೆಚ್ಚಿಸುತ್ತಾರೆ. ಹಾಗೆಯೇ ತಾವಿರುವ ಸ್ಥಳದಿಂದ ಬೇರೆ ಕಡೆಗೆ ವರ್ಗವಾಗಬೇಕೆಂಬ ಉದ್ದೇಶದಲ್ಲಿ ಮಕ್ಕಳ ಸಂಖ್ಯೆಯನ್ನು ಕಡಿಮೆ ತೋರಿಸುತ್ತಾರೆ.

ತಮ್ಮ ಅನುಕೂಲಕ್ಕಾಗಿ ಸರ್ಕಾರಕ್ಕೆ ಇಂತಹ ತಪ್ಪು ಮಾಹಿತಿಯನ್ನು ನೀಡುತ್ತಿರುವ ಶಿಕ್ಷಕರ ಬಗ್ಗೆ ಸರ್ಕಾರಕ್ಕೆ ದೂರು ಬಂದಲ್ಲಿ ಕೊಡಲೆ ಅಂತಹ ಶಿಕ್ಷಕರ ಮೇಲೆ ಕಠಿಣಕ್ರಮ ಕೈಗೊಳ್ಳಲಾಗುವುದೆಂದು ಸಚಿವರು ಸಭೆಗೆ ಭರವಸೆ ನೀಡಿದರು. ರಾಜ್ಯದಾದ್ಯಂತ ಸುಮಾರು 1 ಲಕ್ಷ 68 ಸಾವಿರ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದು,

ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಬಹುಪಾಲು ಮಕ್ಕಳು ವಲಸೆ ಜೀವನ ನಡೆಸುವ ಕುಟುಂಬದ ಮಕ್ಕಳಾಗಿದ್ದಾರೆ. ಅಂತಹ  ಮಕ್ಕಳಿಗೆ ಟೆಂಟ್ ಶಾಲೆಗಲ ಮೂಲಕ ಶಿಕ್ಷಣವನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

# ಸಚಿವರ ಪ್ರವಾಸ

**ಬೆಳಗಾವಿ:ಡಿಸೆಂಬರ್:12:(ಕರ್ನಾಟಕ ವಾರ್ತೆ):-**

ಸಹಕಾರ ಸಚಿವ ಶ್ರೀ ಹೆಚ್.ಎಸ್.  ಮಹದೇವ ಪ್ರಸಾದ್ ಅವರು ಡಿಸೆಂಬರ್ 14 ರಂದು ಕೋಲಾರ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.  ಅಂದು ಸಂಜೆ ಬೆಳಗಾವಿಗೆ ಪ್ರವಾಸ ಮಾಡುವರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.